**ಸಾಕ್ಷಿಗೆ ದಿನಾಂಕ 29-07-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಶಿವುಕುಮಾರ್ ವಕೀಲರು ಶ್ರೀ ಕೆ ಎನ್ ವಕೀಲರ ಪರವಾಗಿಃ**

1. ನನಗೆ ಅಪಘಾತದ ಸಮಯದಲ್ಲಿ 41 ವರ್ಷ ವಯಸ್ಸಾಗಿತ್ತು. ನಾನು ಎಂ ಸಿ ಎ ವಿದ್ಯಾಭ್ಯಾಸ ಮಾಡಿರತ್ತೇನೆ. ಈಗ ನಾನು ಬೆಂಗಳೂರಿನ ತ್ಯಾಗರಾಜ ನಗರದಲ್ಲಿ ವಾಸವಿದ್ದೇನೆ. ನಾನು ಅಪಘಾತದ ನಂತರ ಯಾವುದೇ ಕೆಲಸ ಮಾಡುತ್ತಿಲ್ಲ. ಈಗ ಜೀವನ ನಡೆಸಲು ಏನು ಮಾಡಿಕೊಂಡಿದ್ದೀರಿ ಎಂದರೆ ಅಪಘಾತದ ಪೂರ್ವದಲ್ಲಿ ಉಳಿತಾಯ ಮಾಡಿಕೊಂಡಿದ್ದ ಹಣದಲ್ಲಿ ಜೀವನ ನಡೆಸುತ್ತಿದ್ದೇನೆ. ನನಗೆ ಈಗ ಕೆಲಸ ಮಾಡಲು ಆಗುವುದಿಲ್ಲ ಎಂದು ವೈದ್ಯರಿಂದ ಯಾವುದೇ ಅಂಗನ್ಯೂನತಾ ಪ್ರಮಾಣಪತ್ರ ಪಡೆದಿರುವುದಿಲ್ಲ ಎಂದರೆ ಸರಿ.

2. ಅಪಘಾತದ ಸಮಯದಲ್ಲಿ ನಾನು ನನಗೆ ಸೇರಿದ ಕೆಎ-04-ಕೇಇ-8517 ದ್ವಿಚಕ್ರ ವಾಹನದ ಮೇಲೆ ನನ್ನ ಊರಿನಿಂದ ಬೆಂಗಳೂರಿಗೆ ಬರುತ್ತಿದ್ದೇನು. ಸದರಿ ದ್ವಿಚಕ್ರ ವಾಹನಕ್ಕೆ ಲಿಬರ್ಟಿ ಜನರಲ್ ವಿಮಾ ಕಂಪನಿಯ ವಿಮೆ ಮಾಡಿಸಿದ್ದೇನು. ಸದರಿ ವಿಮೆಯು ಅಪಘಾತದ ಸಮಯದಲ್ಲಿ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನನಗೆ ದ್ವಿಚಕ್ರ ವಾಹನ ಸವಾರಿ ಮಾಡಲು ಡಿಎಲ್ ಇದ್ದು ಅದನ್ನು ಹಾಜರುಪಡಿಸುತ್ತೇನೆ.

3. ಅಪಘಾತವು ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೇನು. ರಸ್ತೆಯ ಎಡಭಾಗದಲ್ಲಿ ಬಿಳಿಪಟ್ಟಿ ಇದೆ ಎಂದರೆ ಸರಿ. ಅಪಘಾತವು ರಸ್ತೆಯ ಎಡಭಾಗದ ಬಿಳಿಪಟ್ಟಿಯಿಂದ ಒಂದೂವರೆ ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತದ ಸಮಯದಲ್ಲಿ ನಾನು ಒಬ್ಬನೇ ಸವಾರಿ ಮಾಡುತ್ತಿದ್ದೇನು. ಹೆದ್ದಾರಿ ಪ್ರಾಧಿಕಾರದವರು ದ್ವಿಚಕ್ರ ವಾಹನಗಳು ಸಂಚಾರ ಮಾಡಲು ಹೆದ್ದಾರಿಯಲ್ಲಿ ಪ್ರತ್ಯೇಕ ಪಥ ಮೀಸಲಿರಿಸಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಯ ಎಡಭಾಗದಲ್ಲಿ ಇರುವ ಬಿಳಿಪಟ್ಟಿಯ ಎಡಗಡೆ ಇರುವ ರಸ್ತೆ ದ್ವಿಚಕ್ರ ವಾಹನ ಸಂಚಾರ ಮಾಡಲು ನಿಗಧಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ಒಂದನೇ ಎದುರುದಾರರ ದ್ವಿಚಕ್ರ ವಾಹನ ಹಿಂದಿನಿಂದ ಬರುತ್ತಿತ್ತು. ಸದರಿ ವಾಹನವನ್ನು ನಾನು ಗಮನಿಸಿರುವುದಿಲ್ಲ. ನಾನು ನನ್ನ ದ್ವಿಚಕ್ರ ವಾಹನವನ್ನು ಏಕಾಏಕಿ ಬಲಭಾಗಕ್ಕೆ ತೆಗೆದುಕೊಂಡಿದ್ದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಮುಂಭಾಗದ ಹೆಡ್ ಲೈಟ್, ಪುಟ್ ರೆಸ್ಟ್, ಹ್ಯಾಂಡಲ್ ಗಳು ಜಖಂಗೊಂಡಿರುತ್ತವೆ. ಐಎಂವಿ ವರದಿಯ ಪ್ರಕಾರ ಮುಖಾಮುಖಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಹಿಂಭಾಗ ಸ್ವಲ್ಪ ಜಖಂಗೊಂಡಿರುತ್ತದೆ. ನನ್ನ ದ್ವಿಚಕ್ರ ವಾಹನಕ್ಕೆ ಉಂಟಾದ ಜಖಂಗಳಿಗೆ ನನ್ನ ದ್ವಿಚಕ್ರ ವಾಹನದ ವಿಮೆ ಕಂಪನಿಯಿಂದ ವಾಹನದ ಜಖಂ ಪರಿಹಾರ ಪಡೆದಿರುತ್ತೇನೆ.

5. ದೂರು ನೀಡಿದವರು ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ನನ್ನ ವಾಹನಕ್ಕೆ ಡಿಕ್ಕಿಪಡಿಸಿದ ದ್ವಿಚಕ್ರ ವಾಹನದ ಸವಾರನ ಹೆಸರು ಅಜಿತ್ ಎಂದು ಅಪಘಾತದ ದಿನವೇ ತಿಳಿದಿತ್ತು. ನಿಪಿ.9 ಗಾಯದ ಪ್ರಮಾಣ ಪತ್ರದಲ್ಲಿ ಕೇವಲ ಆರ್ ಟಿ ಎ ಎಂದು ಮಾತ್ರ ನಮೂದು ಇದ್ದು, ಯಾವ ವಾಹನದಿಂದ ಅಪಘಾತವಾಗಿದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ.10 ದೋಷಾರೋಪಣಾಪಟ್ಟಿಯಲ್ಲಿ ಗಾಯಾಳು ಮಂಜೇಗೌಡ ಎಂದು ನಮೂದು ಇದ್ದು, ಅವರು ಯಾರು ಎಂದು ನನಗೆ ಗೊತ್ತಿಲ್ಲ.

6. ಅಪಘಾತದ ನಂತರ ನಾನು ಮತ್ತು ಒಂದನೇ ಎದುರುದಾರರು ಇಬ್ಬರು ಸಹ ಆದಿಚುಂಚನಗಿರಿ ಆಸ್ಪತ್ರೆ, ಬೆಳ್ಳೂರು ಕ್ರಾಸ್ ಗೆ ದಾಖಲಾಗಿರುತ್ತೇವೆ. ನಿಪಿ.14 ರ ಪ್ರಕಾರ ನನಗೆ ಎಲ್ ಎಂ ವಿ ಡಿಎಲ್ ಇದ್ದು, ನನಗೆ ದ್ವಿಚಕ್ರ ವಾಹನ ಚಾಲನೇ ಮಾಡಲು ಡಿಎಲ್ ಇಲ್ಲ ಎಂದರೆ ಸರಿ. ಆದಿಚುಂಚನಗಿರಿ ಆಸ್ಪತ್ರೆಯಿಂದ ಬೆಂಗಳೂರಿನ ಸ್ಪರ್ಶ್ ಆಸ್ಪತ್ರೆಗೆ ದಾಖಲಾಗಿದ್ದೇನು, ಅಲ್ಲಿ ಮೂರು

ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಶಸ್ತ್ರಚಿಕಿತ್ಸೆಯಾಗಿಲ್ಲ ಎಂದರೆ ಸರಿ. ನನಗೆ ಅಪಘಾತದಲ್ಲಿ ನನ್ನ ಎದೆ ಮೂಳೆಗೆ ಗಾಯಗಳು ಆಗಿರುತ್ತವೆ.

7. ನಿಪಿ.15 ರ ಕ್ರಮಸಂಖ್ಯೆ 5 ರ ಪ್ರಕಾರ ಅಂತಿಮ ಬಿಲ್ಲು ಅಲ್ಲ ಎಂದರೆ ಸರಿ. ನಿಪಿ.15 ರ ಕ್ರಮಸಂಖ್ಯೆ 5 ದ್ವಿತೀಯ ಪ್ರತಿ ಎಂದರೆ ಸರಿ. ನಿಪಿ.15 ರ ಕ್ರಮಸಂಖ್ಯೆ 5 ರ ಮುಂಗಡ ಹಣ ಪಾವತಿ ರಶೀದಿಗಳು ಸಹ ದ್ವಿತೀಯ ಪ್ರತಿಗಳು ಎಂದರೆ ಸರಿ. ಮೂಲ ಡಿಸ್ಚಾರ್ಜ್ ಸಮ್ಮರಿ ಮತ್ತು ಮುಂಗಡ ಹಣ ಪಾವತಿ ರಶೀದಿಗಳನ್ನು ನಮ್ಮ ಕಂಪನಿಗೆ ನೀಡಿದ ವೈದ್ಯಕೀಯ ಮರುಪಾವತಿ ಸೌಲಭ್ಯ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.15 ರ ಕ್ರಮಸಂಖ್ಯೆ 9, 10, 15, 16, 17 ಮತ್ತು 18 ರ ಬಿಲ್ಲುಗಳಿಗೆ ಮೊಹರು ಮತ್ತು ಸಹಿ ಇಲ್ಲ ಎಂದರೆ ಸರಿ.

ಈ ಹಂತದಲ್ಲಿ ಎರಡನೇ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅವಕಾಶ ಕಲ್ಪಿಸಿ ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

(ಧನೇಶ್ ಮುಗಳಿ)

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**